**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎ ಶರವಣ ಇವರು ನೀಡಿರುವ ಶೂನ್ಯವೇಳೆ ಸೂಚನೆಗೆ ಉತ್ತರ:**

**ಶೂನ್ಯ ವೇಳೆ ಸೂಚನೆ:** ಬೆಂಗಳೂರಿನಲ್ಲಿ 4.27 ಲಕ್ಷ ಕುಟುಂಬಗಳು ಅರ್ಜಿ ಸಲ್ಲಿಸಿ ಏಳೆಂಟು ವರ್ಷ ಕಳೆದರೂ ವಸತಿ ಸಿಕ್ಕಿಲ್ಲ. ಪ್ರಧಾನಮಂತ್ರಿ ಆವಾಸ್ ಯೋಜನೆ(ನಗರ) ಮಾರ್ಗಸೂಚಿ ಅನ್ವಯ 2016-17 ಸಮೀಕ್ಷೆ ಕೈಗೊಂಡಿತ್ತು. ಅದರನ್ವಯ 4,19,550 ನಿವೇಶನರಹಿತ ಹಾಗೂ 7,820 ವಸತಿರಹಿತ 4,27,370 ಅರ್ಜಿ ಸಲ್ಲಿಸಿವೆ. ಅಧಿಕಾರಿಗಳ ನಿರ್ಲಕ್ಷದಿಂದಾಗಿ ಕಾಲಮಿತಿಯಲ್ಲಿ ಮನೆ ಸಿಗದೆ ಅರ್ಜಿದಾರರು ಪರದಾಡುತ್ತಿದ್ದಾರೆ. ಪ್ರಧಾನಮಂತ್ರಿ ಆವಾಸ್ ಯೋಜನೆ, ವಾಜಪೇಯಿ ವಸತಿ ಯೋಜನೆ ಮತ್ತು ಅಂಬೇಡ್ಕರ್ ವಸತಿ ಯೋಜನೆ ಸಮನ್ವಯದೊಂದಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ರಾಜೀವ್ ಗಾಂಧಿ ವಸತಿ ನಿಗಮ (ಆರ್‌ಜಿಎಚ್‌ಸಿಎಲ್) ವಸತಿ ಸೌಲಭ್ಯ ಕಲ್ಪಿಸಲು 80,542 ಮನೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದೆ. ಶೇ.85 ಮನೆಗಳ ನಿರ್ಮಾಣವಾಗಿಲ್ಲ. ರಾಜೀವ್ ಗಾಂಧಿ ವಸತಿ ನಿಗಮದಿಂದ ವಿಶೇಷ ವರ್ಗದ ಅಡಿ ತೃತೀಯಲಿಂಗಿಗಳು, ಅಂಗವಿಕಲರು, ವಿಧವೆಯರು, ಎಚ್‌ಐವಿಪೀಡಿತರು, ಕುಷ್ಠರೋಗದಿಂದ ಗುಣಮುಖರಾದವರಿಗೆ ಮತ್ತು ಬೀದಿಬದಿ ವ್ಯಾಪಾರಿ ಫಲಾನುಭವಿಗಳಿಗಾಗಿ 1,488 ಮನೆಗಳನ್ನು ನಿರ್ಮಿಸಲಾಗುತ್ತಿದ್ದು, ಕೇವಲ 384 ಮನೆಗಳು ಪೂರ್ಣಗೊಂಡಿದ್ದು, 1,104 ಮನೆಗಳ ನಿರ್ಮಾಣದ ಹಂತದಲ್ಲಿವೆ. ಅರ್ಜಿದಾರರೇ ನಿರ್ಮಿಸಿಕೊಳ್ಳಲು 1,055 ಮನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇದರಲ್ಲಿ 300 ಮನೆಗಳು ಪೂರ್ಣಗೊಂಡರೆ, 59 ಪ್ರಗತಿ ಹಂತದಲ್ಲಿವೆ. 696 ಮನೆಗಳು ಇನ್ನೂ ಪ್ರಾರಂಭವಾಗಿಲ್ಲ. ಲಕ್ಷ ಬಹುಮಹಡಿ ವಸತಿ ಯೋಜನೆಯಡಿಯಲ್ಲಿ ಬಡ ಕುಟುಂಬಗಳಿಗೆ ವಸತಿ ಸೌಲಭ್ಯ ಒದಗಿಸಲು 2017ರಲ್ಲಿ 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ ಘೋಷಿಸಿದ್ದು. ಸರ್ಕಾರ 1,057 ಎಕರೆ ಜಮೀನನ್ನು ಉಚಿತವಾಗಿ ಕೊಟ್ಟಿತ್ತು. ಪ್ರಸ್ತುತ 64 ಯೋಜನಾ ಪ್ರದೇಶಗಳಲ್ಲಿ 514 ಎಕರೆಯಲ್ಲಿ 45,124 ಮನೆಗಳನ್ನು ಜಿಪ್ಲೆಸ್‌ಯಿಂದ ಎಸ್‌ಪ್ಲೆಸ್ 14 ಮಾದರಿಯಡಿ ಮೂಲಸೌಕರ್ಯ ಸೌಲಭ್ಯದೊಂದಿಗೆ 5,508 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಇದರಲ್ಲಿ ಕೇವಲ 6,689 ಮನೆಗಳು ಪೂರ್ಣಗೊಂಡಿವೆ. ಇನ್ನೂ 38,435 ಮನೆಗಳು ಅಪೂರ್ಣವಾಗಿವೆ. 2016-17ನೇ ಸಾಲಿನಲ್ಲಿ ಸಮೀಕ್ಷೆಯಂತೆ 413 ಕೊಳಗೇರಿ ಪ್ರದೇಶಗಳಲ್ಲಿ 64,707 ಕಚ್ಚಾ/ಸೆಮಿಪಕ್ಕಾ/ಗುಡಿಸಲು ಹೊಂದಿರುವ ವಸತಿರಹಿತರು ಇದ್ದಾರೆ. ಇಲ್ಲಿಯೂ ಸಹ 8,549 ಮನೆಗಳು ಪೂರ್ಣಗೊಂಡಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ತುರ್ತಾಗಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಆಗ್ರಹಿಸುತ್ತೇನೆ.

ಈ ವಿಷಯದ ಬಗ್ಗೆ ದಿನಾಂಕ:12.08.2025 ರಂದು ವಿಜಯವಾಣಿ ದಿನ ಪತ್ರಿಕೆ ಪ್ರಕಟಗೊಂಡಿರುವ ಸಂಪಾದಕೀಯ ನಕಲು ಲಗತ್ತಿಸಿರುತ್ತೇನೆ. ಈ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಉತ್ತರ:** ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಮತ್ತು ರಾಜೀವ್ ಗಾಂಧಿ ವಸತಿ ನಿಗಮದಿಂದ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)ಯಡಿ ಮನೆಗಳ ಹಂಚಿಕೆ /ಪ್ರಗತಿ:

ಕೇಂದ್ರ ಸರ್ಕಾರವು ರಾಜೀವ್ ಆವಾಸ್ ಯೋಜನೆಯನ್ನು ಸ್ಥಗಿತಗೊಳಿಸಿ ಪ್ರಧಾನ ಮಂತ್ರಿಗಳ ಆವಾಸ್ ಅಭಿಯಾನಯನ್ನು ದಿನಾಂಕ:25.06.2015 ರಂದು ಜಾರಿಗೊಳಿಸಿರುತ್ತದೆ.

ಅದರಂತೆ, ಸದರಿ ಯೋಜನೆಯನ್ನು ರಾಜ್ಯದಲ್ಲಿ ವಾಜಪೇಯಿ ನಗರ ವಸತಿ ಯೋಜನೆ ಮತ್ತು ಡಾ|| ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಗಳೊಂದಿಗೆ ಸಮನ್ವಯಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

PMAY(U)-AHP ಘಟಕದಡಿ 2015-16ನೇ ಸಾಲಿನಿಂದ ಈವರೆಗೆ ಒಟ್ಟು 2,74,156 ಮನೆಗಳು ಈ ಕೆಳಗಿನಂತೆ ಕೇಂದ್ರ/ರಾಜ್ಯ ಸರ್ಕಾರದಿಂದ ಅನುಮೋದನೆಗೊಂಡಿರುತ್ತವೆ.

| ಅನುಷ್ಠಾನ ಸಂಸ್ಥೆ | ಮನೆಗಳ ಸಂಖ್ಯೆ |
|---|---|
| KSDB | 178600 |
| RGHCL | 47858 |
| RGHCL - CM 1 Lakh | 45124 |
| BDA | 364 |
| ULB - PKGB | 2210 |
| Total | 274156 |

ಪ್ರಧಾನ ಮಂತ್ರಿ ಆವಾಸ್ ಯೋಜನೆ(ನ)ರಡಿ ಅನುಷ್ಠಾನ ಸಂಸ್ಥೆಗಳು ಯೋಜನೆಗಳಿಗೆ ಟೆಂಡರ್ ಆಹ್ವಾನಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದು, ಈವರೆಗೆ ಅನುಷ್ಠಾನ ಸಂಸ್ಥೆವಾರು ಸಾಧಿಸಿರುವ ಭೌತಿಕ ಪ್ರಗತಿ ಈ ಕೆಳಗಿನಂತಿದೆ.

| ಅನುಷ್ಠಾನ ಸಂಸ್ಥೆ | ಮನೆಗಳ ಸಂಖ್ಯೆ | ಪೂರ್ಣಗೊಂಡಿರುವ ಮನೆಗಳ ಸಂಖ್ಯೆ | ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ | ಪ್ರಾರಂಭಿಸಬೇಕಾಗಿರುವ ಮನೆಗಳ ಸಂಖ್ಯೆ | ಹಂಚಿಕೆ / ಸಿದ್ಧವಿರುವ ಮನೆಗಳ ಸಂಖ್ಯೆ |
|---|---|---|---|---|---|
| KSDB | 178600 | 79134 | 39225 | 60241 | 79134* |
| ULB | 47858 | 13303 | 25815 | 8740 | 13303 |
| RGHCL-OLH | 45124 | 18251 | 21653 | 5220 | 7618 |
| BDA | 364 | 364 | 0 | 0 | 364 |
| ULB-PKGB | 2210 | 1832 | 201 | 177 | 901 |
| Grand Total | 274156 | 112884 | 86894 | 74378 | 101320 |

(79134*= ಈ ಮನೆಗಳ ಪೈಕಿ 36,789 ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ ಮತ್ತು ಉಳಿದ 42,345 ಮನೆಗಳನ್ನು ಪೂರ್ಣಗೊಳಿಸಿದ್ದು, ಮಾನ್ಯ ಮುಖ್ಯ ಮಂತ್ರಿಯವರಿಂದ ಹಂಚಿಕೆ ಮಾಡಲು ಉದ್ದೇಶಿಸಿಲಾಗಿದೆ)

ಮೇಲಿನ ಯೋಜನೆಗಳ ಕಾಮಗಾರಿ 2015-16ನೇ ಸಾಲಿನಿಂದ ಪ್ರಾರಂಭವಾಗಿದ್ದರೂ, ಈ ಕೆಳಗಿನ ಕಾರಣಗಳಿಂದಾಗಿ ವಿಳಂಬವಾಗಿರುತ್ತವೆ.

1. ಅಂತಿಮ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ವಿಳಂಬ.
2. ಫಲಾನುಭವಿಗಳು ತಮ್ಮ ಪಾಲಿನ ವಂತಿಕೆ ಪಾವತಿಸುವಲ್ಲಿ ವಿಳಂಬ.
3. ಬ್ಯಾಂಕುಗಳು ಫಲಾನುಭವಿಗಳಿಗೆ ಸಾಲ ಸೌಲಭ್ಯ ಒದಗಿಸಲು ಮುಂದೆ ಬರದೇ ಇರುವುದು.
4. ಸ್ಥಳೀಯ ಸಂಸ್ಥೆಗಳಿಂದ ಗುತ್ತಿಗೆದಾರರಿಗೆ ಜಮೀನು ಹಸ್ತಾಂತರ ಮಾಡುವಲ್ಲಿ ವಿಳಂಬ, ನ್ಯಾಯಾಲಯದ ವ್ಯಾಜ್ಯ / ಸ್ಥಳೀಯ ಅಡೆತಡೆಗಳು / ಸಂಪರ್ಕ ರಸ್ತೆಗಳಿಲ್ಲದಿರುವುದು ಇತ್ಯಾದಿ.
5. ಈ ಕಾರಣಗಳ ಹಿನ್ನೆಲೆಯಲ್ಲಿ ಕೆಲವು ಯೋಜನೆಗಳಿಗೆ ಸ್ಥಳ ಬದಲಾವಣೆ ಮಾಡಿ ಗುತ್ತಿಗೆದಾರರಿಗೆ ಬದಲಿ ಜಮೀನು ಹಸ್ತಾಂತರಿಸುವಲ್ಲಿ ವಿಳಂಬ.
6. ಸಂಬಂಧಿತ ಇಲಾಖೆಗಳಿಂದ NoC ಪಡೆಯುವಲ್ಲಿ ವಿಳಂಬವಾಯಿತು.
7. ನಗರ ಸ್ಥಳೀಯ ಸಂಸ್ಥೆಗಳು ಯೋಜನೆಗಳ ಯೋಜನಾ ಪ್ರದೇಶಗಳಿಗೆ ಮೂಲಸೌಕರ್ಯ ಒದಗಿಸಲು ವಿಳಂಬ ಮಾಡುತ್ತಿರುವುದು.
8. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ಮಿಸುತ್ತಿರುವ ಹೆಚ್ಚಿನ ಮನೆಗಳನ್ನು INSITU ಮಾದರಿಯಲ್ಲಿ ನಿರ್ಮಿಸುತ್ತಿದ್ದು ಇದರಿಂದಾಗಿ ಫಲಾನುಭವಿಗಳಿಗೆ ಪರ್ಯಾಯ ವ್ಯವಸ್ಥೆ / ಬಾಡಿಗೆಗೆ ಮನೆಗಳ ಲಭ್ಯತೆ ಇತ್ಯಾದಿ

ಸಮಸ್ಯೆಗಳ ಕಾರಣದಿಂದ ಮಂಡಳಿಯಿಂದ ಮನೆಗಳನ್ನು ಹಂತ ಹಂತವಾಗಿ ನಿರ್ಮಾಣ ಮಾಡಲಾಗುತ್ತಿದೆ.

9. ಕೋವಿಡ್-19 ಸಾಂಕ್ರಾಮಿಕ ರೋಗವೂ ಸಹ ಯೋಜನೆಗಳ ಕಾಮಗಾರಿ ವಿಳಂಬವಾಗುವಲ್ಲಿ ಕಾರಣವಾಗಿರುತ್ತದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ವಿಳಂಬವಾಗಿರುವ ಯೋಜನೆಗಳಡಿ ಮನೆಗಳ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಸರ್ಕಾರದಿಂದ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: DoH 148 HFA 2023, ದಿನಾಂಕ:30.12.2023 ಮತ್ತು DoH 148 HFA 2023 ದಿನಾಂಕ:17.04.2025 ರಂತೆ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಯೋಜನೆಗಳಿಗೆ ಫಲಾನುಭವಿಗಳಿಂದ ಗರಿಷ್ಠ ರೂ 1.00 ಲಕ್ಷಗಳನ್ನು ಮಾತ್ರ ಸಂಗ್ರಹಿಸಲು ಹಾಗೂ ಉಳಿದ ಫಲಾನುಭವಿಗಳ ಪಾಲಿನ ವಂತಿಕೆ ಮೊತ್ತ ಮತ್ತು ಅಗತ್ಯ ಮೂಲಸೌಕರ್ಯ ಒದಗಿಸಲು ಒಟ್ಟು ರೂ. 6170.00 ಕೋಟಿ ಮಂಜೂರು ಮಾಡಿ ಆದೇಶಿಸಿದೆ.
2. ಸರ್ಕಾರದ ಆದೇಶ ಸಂಖ್ಯೆ: DoH 148 HFA 2023, ದಿನಾಂಕ:30.12.2023 ರಂತೆ ಈವರೆಗೆ ರೂ 808.00 ಕೋಟಿಗಳನ್ನು ಸರ್ಕಾರದಿಂದ ಫಲಾನುಭವಿ ವಂತಿಕೆಗಾಗಿ ಬಿಡುಗಡೆ ಮಾಡಲಾಗಿದೆ.
3. ಸರ್ಕಾರದ ಆದೇಶ ಸಂಖ್ಯೆ: DoH 127 HFA 2024, ದಿನಾಂಕ:13.05.2025 ರಂತೆ, "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ 12,153 ಫಲಾನುಭವಿಗಳಗೆ ಫಲಾನುಭವಿಗಳ ಪಾಲಿನ ಮೊತ್ತದಲ್ಲಿ ತಲಾ ರೂ.1.00 ಲಕ್ಷಗಳ ಮೊತ್ತವನ್ನು ಕಡಿಮೆ ಮಾಡಿದ್ದು, ಸದರಿ ಮೊತ್ತವನ್ನು ಅಂದರೆ ರೂ. 121.53 ಕೋಟಿಗಳ ಮೊತ್ತವನ್ನು ರಾಜ್ಯ ಸರ್ಕಾರದಿಂದಲೇ ಭರಿಸಲಾಗುತ್ತಿದೆ.
4. "1 ಲಕ್ಷ ಬಹುಮಹಡಿ ವಸತಿ ಯೋಜನೆ"ಯಡಿ ಸರ್ಕಾರವು ಬಡ್ಡಿ ಸಬ್ಸಿಡಿ ಯೋಜನೆಯನ್ನು ರೂಪಿಸಿದ್ದು, ಸದರಿ ಯೋಜನೆಯಡಿ ಸಾಲ ಪಡೆಯುವ ಎಲ್ಲಾ ಫಲಾನುಭವಿಗಳಿಗೆ ಗರಿಷ್ಠ ರೂ. 3000 ವರೆಗೆ ಬಡ್ಡಿ ಸಹಾಯಧನವನ್ನು ಒದಗಿಸುತ್ತದೆ. ಈ ಬಡ್ಡಿ ಸಹಾಯಧನವನ್ನು ಗರಿಷ್ಠ 10 ವರ್ಷಗಳವರೆಗೆ ಒದಗಿಸುತ್ತಿದೆ.
5. ಸ್ಥಳೀಯ ಸಂಸ್ಥೆಗಳಿಂದ ಅನುಷ್ಠಾನಗೊಳಿಸುತ್ತಿರುವ AHP ಯೋಜನೆಗಳ 47,858 ಫಲಾನುಭವಿಗಳಿಗೆ ಫಲಾನುಭವಿಗಳ ವಂತಿಕೆ ಮತ್ತು ಸದರಿ ಯೋಜನಾ ಪ್ರದೇಶಗಳಿಗೆ ಅಗತ್ಯ ಮೂಲಸೌಕರ್ಯ ಒದಗಿಸಲು ರೂ. 2,344.54 ಕೋಟಿಗಳ ಮೊತ್ತವನ್ನು ಒದಗಿಸುವಂತೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.
6. ಸದರಿ ಯೋಜನೆಗಳ ಕಾಮಗಾರಿಗಾಗಿ SCP/TSP, ಕಟ್ಟಡ ಕಾರ್ಮಿಕ ಕಲ್ಯಾಣ ನಿಧಿ, ಅಲ್ಪಸಂಖ್ಯಾತರ ಇಲಾಖೆ, ಜಿಲ್ಲಾ ಖನಿಜ ಪ್ರತಿಷ್ಠಾನ (DMF) ಇವೇ ಮೊದಲಾದ ಇಲಾಖೆಗಳಿಂದ ಅನುದಾನ ಹೊಂದಾಣಿಕೆ ಮಾಡಲು ಕ್ರಮವಹಿಸಲಾಗುತ್ತಿದೆ.
7. ಯೋಜನೆಯ ಎಲ್ಲಾ SC/ST ಫಲಾನುಭವಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ SCP/TSP ಯೋಜನೆಯಿಂದ ಅನುದಾನ ಒದಗಿಸಲು ಕ್ರಮವಹಿಸಲಾಗುತ್ತಿದೆ.
8. ಯೋಜನೆಯ ಫಲಾನುಭವಿಗಳಿಗೆ ಸಾಲ ಸೌಲಭ್ಯ ಒದಗಿಸಲು ರಾಜ್ಯ ಮಟ್ಟದ ಬ್ಯಾಂಕ್‌ಗಳೊಂದಿಗೆ, ಮತ್ತು ಹೌಸಿಂಗ್ ಫೈನಾನ್ಸ್ ಕಂಪನಿಗಳೊಂದಿಗೆ ನಿಯಮಿತವಾಗಿ ಸಭೆಗಳನ್ನು ನಡೆಸಲಾಗುತ್ತಿದ್ದು, ಅರ್ಜಿ ಮತ್ತು ಅನುಮೋದನೆ ಪ್ರಕ್ರಿಯೆಯನ್ನು ಸರಳಗೊಳಿಸಲು ವಿಶೇಷ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
9. ಮಂಡಳಿಯು ಅನುಷ್ಠಾನಗೊಳಿಸುತ್ತಿರುವ ಪ್ರಗತಿಯಲ್ಲಿರುವ ಮನೆಗಳಿಗೆ ಫಲಾನುಭವಿಗಳಿಂದ ರೂ 1.00 ಲಕ್ಷಗಳನ್ನು ಪಾವತಿಸಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರದದಿಂದ ಬಿಡುಗಡೆಯಾಗುವ ಫಲಾನುಭವಿ ವಂತಿಕೆಗೆ ಅನುಗುಣವಾಗಿ ಮನೆಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ನಿಗಮದಿಂದ / ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಎಲ್ಲಾ ಗುತ್ತಿಗೆದಾರರೊಂದಿಗೆ ನಿಯಮಿತವಾಗಿ ಪ್ರಗತಿ ಪರಿಶೀಲನಾ ಸಭೆ ನಡೆಸುತ್ತಿದ್ದು, ಸಕಾಲದಲ್ಲಿ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ.

**"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಹಂಚಿಕೆ ಮನೆಗಳ ಪ್ರಗತಿ:**

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಸತಿ ರಹಿತ ಬಡ ಕುಟುಂಬಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಬೆಂಗಳೂರು ನಗರದಲ್ಲಿ ರಾಜ್ಯ ಸರ್ಕಾರ ವಸತಿ ಯೋಜನೆಗಳಾದ ಡಾ|| ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಗಳನ್ನು, ಕೇಂದ್ರ ಸರ್ಕಾರದ "ಪ್ರಧಾನ ಮಂತ್ರಿ ಅವಾಸ್ ಯೋಜನೆ(ನಗರ)"ಯ ಅನುದಾನದ ಮೊತ್ತಗಳನ್ನು ಸಂಯೋಜಿಸಿಕೊಂಡು ಹಾಗೂ ಫಲಾನುಭವಿಗಳ ವಂತಿಕೆಯೊಂದಿಗೆ ಮತ್ತು ಯೋಜನೆಯಡಿ ನಿರ್ಮಿಸುವ ನಿವೇಶನಗಳ ಅಥವಾ ಬಹುಮಹಡಿ ಮನೆಗಳ ಅಥವಾ ಉಳಿಕೆ ಜಮೀನನ್ನು ಮಾರಾಟದಿಂದ ಬರುವ ಮೊತ್ತದಿಂದ ಆರ್ಥಿಕವಾಗಿ ಹಿಂದುಳಿದವರಿಗಾಗಿ ವಸತಿ ಯೋಜನೆಯನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ವಇ 57 ಹೆಚ್‌ಎಹೆಚ್ 2017, ದಿನಾಂಕ 23.10.2017 ರಲ್ಲಿ ಮಂಜೂರಾತಿ ನೀಡಲಾಗಿದೆ.

ಸದರಿ ಯೋಜನೆಯಡಿ ಮೊದಲನೇ ಮತ್ತು ಎರಡನೇ ಹಂತದಲ್ಲಿ ಒಟ್ಟು 48,950 ಮನೆಗಳನ್ನು (1BHK-45,124 ಹಾಗೂ 2BHK-3826) ನಿರ್ಮಿಸಲು ಬೆಂಗಳೂರು ನಗರ ಜಿಲ್ಲೆಯ 73 ಸ್ಥಳಗಳಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.

ಇದುವರೆಗೂ ವಿವಿಧ ಯೋಜನಾ ಸ್ಥಳಗಳಲ್ಲಿ 1BHK- 7618 ಮನೆಗಳು ಪೂರ್ಣಗೊಂಡಿದ್ದು, 10633 ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, 21653 ವಿವಿಧ ಹಂತದಲ್ಲಿರುತ್ತದೆ. ಉಳಿದ 5220 ಮನೆಗಳು ಪ್ರಾರಂಭಿಕ ಹಂತದಲ್ಲಿರುತ್ತವೆ. (ವಿವರವನ್ನು ಅನುಬಂಧ-01 ರಲ್ಲಿ ಒದಗಿಸಿದೆ.)

ಸದರಿ ಯೋಜನೆಯಡಿ ಪೂರ್ಣಗೊಂಡಿರುವ ಮನೆಗಳಿಗೆ ಫಲಾನುಭವಿಗಳಿಂದ ಪೂರ್ಣ ವಂತಿಕೆ ಮೊತ್ತವನ್ನು ಪಾವತಿಸಿಕೊಂಡು, ಈ ಫಲಾನುಭವಿಗಳಿಗೆ ನೋಂದಣಿ ಪ್ರಕ್ರಿಯೆ ಮತ್ತು ಕೀಗಳನ್ನು ಹಸ್ತಾಂತರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಯೋಜನೆಯಡಿ ಈವರೆಗೆ 1 BHK- 14,711 ಮನೆಗಳನ್ನು ಆನ್-ಲೈನ್‌ನಲ್ಲಿ ಅರ್ಹ ಫಲಾನುಭವಿಗಳು ತಮ್ಮ ಸ್ವ-ಇಚ್ಛೆಯಿಂದ ಆಯ್ಕೆ ಮಾಡಿಕೊಂಡಿರುತ್ತಾರೆ.

ಮುಂದುವರೆದು, ವಿವಿಧ ಯೋಜನಾ ಸ್ಥಳಗಳಲ್ಲಿ 2BHK-304 ಮನೆಗಳು ಪೂರ್ಣಗೊಂಡಿದ್ದು, 3522 ವಿವಿಧ ಹಂತದಲ್ಲಿರುತ್ತದೆ. (ವಿವರವನ್ನು ಅನುಬಂಧ-02 ರಲ್ಲಿ ಒದಗಿಸಿದೆ.)

"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ ವಿವಿಧ ಯೋಜನಾ ಸ್ಥಳಗಳಲ್ಲಿ ಒಟ್ಟಾರೆ 7922 ಮನೆಗಳು(1BHK-7618 & 2BHK-304) ಪೂರ್ಣಗೊಂಡಿರುತ್ತದೆ.

ಒಂದು ಲಕ್ಷ ಬಹುಮಹಡಿ ವಸತಿ ಯೋಜನೆಯಡಿ ಪ್ರತಿ ಫಲಾನುಭವಿಯು ಸುಮಾರು ರೂ.7.50 ಲಕ್ಷಗಳಿಂದ ಹಾಗೂ ರೂ.10.50 ಲಕ್ಷಗಳವರೆಗೂ ವಂತಿಕೆ ಮೊತ್ತವನ್ನು ಪಾವತಿಸಬೇಕಾಗಿದೆ. ಆದರೆ ಬಡ ಫಲಾನುಭವಿಗಳು ಸಕಾಲದಲ್ಲಿ ವಂತಿಕೆ ಪಾವತಿಸುವಲ್ಲಿ ವಿಳಂಬವಾದ ಕಾರಣದಿಂದಾಗಿ ಮನೆಗಳ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಪ್ರಸ್ತುತ, ಪ್ರಾರಂಭಿಕ ಠೇವಣಿಯನ್ನು ಪಾವತಿಸಿ, ಆನ್-ಲೈನ್‌ನಲ್ಲಿ ಮನೆಗಳನ್ನು ಆಯ್ಕೆ ಮಾಡಿಕೊಂಡಿರುವ 12,153 ಫಲಾನುಭವಿಗಳಿಗೆ ಮಾತ್ರ ಅವರ ಪಾಲಿನ ವಂತಿಕೆಯಲ್ಲಿ ರೂ 1.00 ಲಕ್ಷಗಳನ್ನು ಸರ್ಕಾರದಿಂದ ಭರಿಸಲು ಅಗತ್ಯವಿರುವ ರೂ. 121.53 ಕೋಟಿಗಳನ್ನು ಬಿಡುಗಡೆ ಮಾಡಿದೆ.
2. ಫಲಾನುಭವಿಗಳು ರಾಷ್ಟ್ರೀಕೃತ/ ಖಾಸಗಿ / NBFC ಹಣಕಾಸು ಸಂಸ್ಥೆಗಳಿಂದ ಪಡೆದುಕೊಂಡ ಸಾಲದ ಬಡ್ಡಿ ಮೊತ್ತದಲ್ಲಿ ಶೇಕಡ 3 ರಿಂದ 5 ರಷ್ಟು ಮೊತ್ತವನ್ನು ಸಹಾಯಧನವಾಗಿ ಸರ್ಕಾರದಿಂದ ಪಾವತಿಸಿ ಅವರ ಮಾಸಿಕ ಸಾಲದ ಕಂತಿನ ಹೊರೆಯನ್ನು ಕಡಿಮೆ ಮಾಡಲು "ಬಡ್ಡಿ ಸಹಾಯಧನ ಯೋಜನೆ" (Interest Subvention Scheme) ಅನ್ನು ಜಾರಿಗೆ ತರಲಾಗಿದೆ.
3. ಒಟ್ಟು ನಿಗಮದಿಂದ ನಿರ್ಮಿಸಲಾಗುತ್ತಿರುವ 3826 2 BHK ಮನೆಗಳ ಪೈಕಿ, 304 ಮನೆಗಳನ್ನು ಪೂರ್ಣಗೊಳಿಸಿ ಮಾರಾಟ ಮಾಡಲಾಗಿರುತ್ತದೆ. ಬಾಕಿ ಇರುವ 3,522-2BHK ಫ್ಲಾಟ್‌ಗಳನ್ನು ಹರಾಜು ಮಾಡಿ ಸಂಗ್ರಹಿಸಿದ ಮೊತ್ತದಲ್ಲಿ ಬಾಕಿ ಇರುವ ಮನೆಗಳನ್ನು ಪೂರ್ಣಗೊಳಿಸಲಾಗುವುದು.

ಮೇಲ್ಕಂಡ ಕ್ರಮಗಳನ್ನು ಕೈಗೊಂಡು "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ ನಿರ್ಮಾಣಗೊಳ್ಳುತ್ತಿರುವ ಮನೆಗಳನ್ನು ಡಿಸೆಂಬರ್-2025ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

**2016-17ನೇ ಸಾಲಿನ ಸಮೀಕ್ಷೆಯಂತೆ 413 ಕೊಳಗೇರಿ ಪ್ರದೇಶಗಳಲ್ಲಿ 64707 ಕಚ್ಚಾ, ಸೆಮಿಪಕ್ಕ/ಗುಡಿಸಲು ಹೊಂದಿರುವ ವಸತಿ ರಹಿತರು ಇದ್ದಾರೆ. ಇಲ್ಲಿಯೂ ಸಹ 8549 ಮನೆಗಳು ಪೂರ್ಣಗೊಂಡಿಲ್ಲ:**

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು PMAY(U) ಯೋಜನೆಯಡಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಒಟ್ಟು 413 ಘೋಷಿತ ಕೊಳಗೇರಿ ಪ್ರದೇಶಗಳಲ್ಲಿ ಬೇಡಿಕೆ ಸಮೀಕ್ಷೆ ಮಾಡಿ 1,23,865 ಕಚ್ಚಾ ಮತ್ತು ಸೆಮಿ ಪಕ್ಕಾ ಮನೆಗಳನ್ನು ಗುರುತಿಸಲಾಗಿರುತ್ತದೆ. ಇವುಗಳ ಪೈಕಿ ಬೆಂಗಳೂರು ನಗರ ಜಿಲ್ಲೆಗೆ 32,875 ಮನೆಗಳು ಅನುಮೋದನೆಯಾಗಿದ್ದು, ಈ ಪೈಕಿ 13,754 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು, ಪ್ರಥಮ ಹಂತದಲ್ಲಿ 7966 ಮನೆಗಳನ್ನು ದಿನಾಂಕ:02.03.2024 ರಂದು ಸನ್ಮಾನ್ಯ ಮುಖ್ಯ ಮಂತ್ರಿಯವರಿಂದ ಲೋಕಾರ್ಪಣೆ ಮಾಡಲಾಗಿದ್ದು, ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ ಮತ್ತು ಪ್ರಸ್ತುತ 2ನೇ ಹಂತದಲ್ಲಿ 5788 ಮನೆಗಳನ್ನು ಸೆಪ್ಟೆಂಬರ್-2025 ರಲ್ಲಿ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ ಹಾಗೂ 6795 ಮನೆಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ. ಸರ್ಕಾರ ಆದೇಶದಂತೆ 12,326 ಮನೆಗಳನ್ನು ಕಡಿತಗೊಳಿಸಲಾಗಿದೆ.

ಪ್ರತಿ ಮನೆಗಳ ಘಟಕ ವೆಚ್ಚ ಸರಾಸರಿ ರೂ.5.95 ಲಕ್ಷಗಳಿಂದ ರೂ.7.52 ಲಕ್ಷಗಳಾಗಿರುತ್ತದೆ. ಈ ಪೈಕಿ ಕೇಂದ್ರ ಸರ್ಕಾರವು 1.5 ಲಕ್ಷಗಳನ್ನು ಹಾಗೂ ರಾಜ್ಯ ಸರ್ಕಾರವು ರೂ. 2.00 ಲಕ್ಷಗಳನ್ನು (ಪರಿಶಿಷ್ಟ ಜಾತಿ/ಪಂಗಡಕ್ಕೆ) ಮತ್ತು ಇತರೇ ಫಲಾನುಭವಿಗಳಿಗೆ ರೂ.1.20 ಲಕ್ಷಗಳನ್ನು ಇತರೇ ಫಲಾನುಭವಿಗಳಿಗೆ ಉಳಿದ ಮೊತ್ತವನ್ನು ಫಲಾನುಭವಿಗಳಿಂದ/ಬ್ಯಾಂಕ್ ನಿಂದ ಸಾಲ ಸೌಲಭ್ಯ ಒದಗಿಸಿ ಫಲಾನುಭವಿ ವಂತಿಕೆ ಭರಿಸಬೇಕಾಗಿರುತ್ತದೆ. ಫಲಾನುಭವಿಗಳು ವಂತಿಕೆ ಪಾವತಿಸಲು ಮುಂದೆ ಬಾರದೇ ಇರುವುದರಿಂದ ಮತ್ತು ಬ್ಯಾಂಕ್ ಗಳು ಕೊಳಗೇರಿ ಫಲಾನುಭವಿಗಳಿಗೆ ಸಾಲ ಮಂಜೂರು ಮಾಡದೇ ಇದ್ದುದರಿಂದ ಮನೆಗಳ ನಿರ್ಮಾಣದಲ್ಲಿ ವಿಳಂಬವಾಗಿರುತ್ತದೆ.

ಇದನ್ನು ಮನಗಂಡು, ಸರ್ಕಾರದ ಆದೇಶ ಸಂಖ್ಯೆ: ವಇ 148 ಹೆಚ್‌ಎಫ್‌ಎ 2023, ದಿನಾಂಕ:30.12.2023ರಲ್ಲಿ ರೂ. 1.00 ಲಕ್ಷಗಳನ್ನು ಫಲಾನುಭವಿಗಳಿಂದ ಪಾವತಿಸಿಕೊಂಡು ಉಳಿದ ಫಲಾನುಭವಿ ವಂತಿಕೆ ಮೊತ್ತವನ್ನು ರಾಜ್ಯ ಸರ್ಕಾರದಿಂದ ಭರಿಸಲು ಆದೇಶವಾಗಿರುತ್ತದೆ. ಅದರಂತೆ ರಾಜ್ಯ ಸರ್ಕಾರದಿಂದ ಫಲಾನುಭವಿ ವಂತಿಕೆಗೆ ಎದುರಾಗಿ ಒಟ್ಟಾರೆ ಬಿಡುಗಡೆಗೊಳಿಸಲಾದ ರೂ. 808.00 ಕೋಟಿಗಳ ಪೈಕಿ ರೂ.202.61 ಕೋಟಿಗಳನ್ನು ಬೆಂಗಳೂರು ನಗರದಲ್ಲಿ ಪೂರ್ಣಗೊಳಿಸಿರುವ ಮನೆಗಳಿಗೆ ಬಳಸಿಕೊಳ್ಳಲಾಗಿದೆ.

ಪ್ರಗತಿಯಲ್ಲಿರುವ 6795 ಮನೆಗಳನ್ನು ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಅನುಷ್ಠಾನವು ಡಿಸೆಂಬರ್-2025ರ ಅಂತ್ಯಕ್ಕೆ ಪೂರ್ಣಗೊಳುತ್ತಿರುವುದರಿಂದ ಫಲಾನುಭವಿಗಳಿಂದ ರೂ.1.00 ಲಕ್ಷಗಳನ್ನು ಪಡೆದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯ ಧನ ಹಾಗೂ ರಾಜ್ಯ ಸರ್ಕಾರದಿಂದ ಫಲಾನುಭವಿ ವಂತಿಕೆ ಬಿಡುಗಡೆಗೆ ಅನುಗುಣವಾಗಿ ಹಂತ ಹಂತವಾಗಿ ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ವಾಸಕ್ಕೆ ನೀಡಲು ಕ್ರಮ ವಹಿಸಲಾಗುತ್ತಿದೆ.

[ಸಂಖ್ಯೆ: ವಇ 161 ಹೆಚ್‌ಎಫ್‌ಎ 2025]

(ಬಿ.ಝೆಡ್. ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.